**ಒ.ಎಸ್.ನಂಬ್ರ: 39/2017 ಪಿ.ಡಬ್ಲ್ಯೂ: 1**

ದಿನಾಂಕ: 11 -07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟಿ ಸವಾಲು: ಪ್ರತಿವಾದಿ ವಾದಿ ಪರ ವಕೀಲರಾದ ಶ್ರೀ ಎಮ್ .ಎಸ್. ಎಸ್. ರವರಿಂದ

ನಾನು ಪ್ರತಿವಾದಿಯ ಮೇಲೆ ಒಂದೇ ದಾವೆಯನ್ನು ಹಾಕಿರುತ್ತೇನೆ. ನನ್ನ ಗಂಡ ಪ್ರತಿವಾದಿಯ ವಿರುದ್ಧ ದಾರಿಯ ವಿಚಾರಕ್ಕೆ ಸಂಬಂಧಿಸಿದಂತೆ O.S. 186/2016 ರಂತೆ ದಾವೆ ಹಾಕಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ಒಳಗೊಂಡ ಸರ್ವೆ ನಂಬರ್ ಹಾಗೂ ಈ ದಾವೆಯಲ್ಲಿದ್ದ ಸರ್ವೆ ನಂಬರ್ ಗಳು ಎರಡು ಒಂದೇ ಎಂದರೆ ಸರಿ. ಆ ದಾವೆಯಲ್ಲಿ ಒಂದು ಕರಾರು ಮತ್ತು ನಕ್ಷೆ ಹಾಜರುಪಡಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎರಡು ದಾವೆಗಳನ್ನು ನನ್ನ ಗಂಡ ಯಾವ ಉದ್ದೇಶಕ್ಕೆ ಹಾಕಿದ್ದಾರೆ ಮತ್ತು ಪ್ರತಿವಾದಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಅಸಲು ನಕ್ಷೆಯನ್ನು ಕೊಡಲು ತೊಂದರೆ ಇದೆಯೇ ಎಂದರೆ ನಕ್ಷೆಯ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಾನು ಉದ್ದೇಶಪೂರ್ವಕವಾಗಿ ನಕ್ಷೆಯನ್ನು ನಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರು ನ್ಯಾಯಲಯಕ್ಕೆ ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ಕರಾರಿನಲ್ಲಿ ಮತ್ತು ನಕ್ಷೆಯಲ್ಲಿ ಕಾಣಿಸಿದ ವಿಚಾರಗಳು ಸರಿ ಇರುತ್ತದೆ.

ಈ ದಾವೆಯನ್ನು ಸಿದ್ದಾಪುರದ ಸರ್ವೆ ನಂಬರ್ 338 ರ ಒಟ್ಟು 2 ಎಕರೆ 60 ಗುಂಟೆ ವಿಸ್ತೀರ್ಣಕ್ಕೆ ಹಾಕಿರುತ್ತೇವೆ. 2 ಎಕರೆ 60 ಗುಂಟೆ ಜಾಗ ಸಂಪೂರ್ಣವಾಗಿ ನನ್ನ ಗಂಡನಿಗೆ ಸೇರಿರುತ್ತದೆ. ಸದರಿ 2 ಎಕರೆ 60 ಗುಂಟೆ ಸಂಪೂರ್ಣವಾಗಿ ನಮ್ಮ ಸ್ವಾಧೀನದಲ್ಲಿದೆ. ಅದರ ಹಕ್ಕು ಮೂಲದಲ್ಲಿ ನನ್ನ ಗಂಡನಿಗೆ ಬಂದಿರುತ್ತದೆ. 1984 ರ ಪೂರ್ವದಲ್ಲಿ ನನ್ನ ಗಂಡನಿಗೆ ಸದರಿ ಸ್ವತ್ತು ದರ್ಕಾಸ್ತು ಮೂಲಕ ಬಂದಿರುತ್ತದೆ. ದರ್ಕಾಸ್ತು ಸಂಬಂದಿಸಿದ ದಾಖಲೆಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. 2 ಎಕರೆ 60 ಗುಂಟೆ ನನ್ನ ಗಂಡನಿಗೆ ಬಂದಿದೆ ಎಂದು ಓದಿ ನೋಡಿರುತ್ತೇನೆ. ಸದರಿ 2 ಎಕರೆ 60 ಗುಂಟೆ ಸ್ಥಳದಲ್ಲಿ ಕಟ್ಟಡ ಇರುವುದಿಲ್ಲ, ತೋಟ ಇರುತ್ತದೆ. ನನ್ನ ಗಂಡನ ಮರಣ ನಂತರ ನಮ್ಮ ಹೆಸರಿಗೆ ದಾಖಲೆಗಳನ್ನು ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿರುತ್ತೇವೆ. ಅಲ್ಲಿ ಪ್ರಕರಣ ದಾಖಲಾಗಿರುತ್ತದೆ. ಆ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ.

ನಮ್ಮ ಸ್ವಾಧೀನಕ್ಕೆ ಪ್ರತಿವಾದಿಯ ಮಗಳು, ಅಳಿಯ ಅಕ್ರಮ ಪ್ರವೇಶ ಮಾಡಿ ತೊಂದರೆ ನೀಡಿರುತ್ತಾರೆ. ಈ ದಾವೆಯಲ್ಲಿ ಅಂದರೆ ಸದರಿ 2 ಎಕರೆ 60 ಗುಂಟೆ ಜಾಗ ನಮಗೆ ಬೇಕು, ಪ್ರತಿವಾದಿ ತೊಂದರೆ ಮಾಡಬಾರದು ಎಂದು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ಹೊರತು ಪಡಿಸಿ ಬೇರೆ ಯಾವುದೇ ಪರಿಹಾರ ಕೇಳುತ್ತಿಲ್ಲ ಎಂದರೆ ಸರಿ. ನಿ.ಪಿ.3 ರ ಕರಾರು ಪತ್ರ ಕಾನೂನು ಬಾಹಿರ ದಾಖಲೆ ಎಂದರೆ ಸರಿಯಲ್ಲ. ನಿ.ಪಿ. 3 ರಲ್ಲಿ ಪುಟ ಸಂಖ್ಯೆ 3 ರಲ್ಲಿ 1-10 ಎಕರೆ ಎಂಬುದನ್ನು 0.70 ಎಂದು ತಿದ್ದು ಪಡಿ ಮಾಡಲಾಗಿದೆ ಎಂದರೆ ಅವರೇ ಮಾಡಿರುವುದಾಗಿ ನುಡಿದಿರುತ್ತಾರೆ. ಅದರ ಜೊತೆಗೆ ಇರುವ ನಕ್ಷೆಯಲ್ಲಿ ಕೂಡ 70 ಸೆಂಟ್ಸ್ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ಸಂಜೀವ ಶೆಟ್ಟಿ ಮತ್ತು ಗೋವಿಂದ ಪೂಜಾರಿ ಯಾರೆಂದು ನನಗೆ ಗೊತ್ತಿಲ್ಲ. ನನ್ನ ಗಂಡ ದಿನಾಂಕ 26-02-2021 ರಲ್ಲಿ ತೀರಿಕೊಂಡಿರುತ್ತಾರೆ .

ಪ್ರತಿವಾದಿಗೆ ದಾವ ಸ್ಥಳದಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಪ್ರತಿವಾದಿಯವರಿಗೆ ದಾವಾ ಸ್ಥಳ ದರ್ಕಾಸ್ತು ಮೂಲಕ ಬಂದಿದೆ ಎಂದರೆ ಸರಿಯಲ್ಲ. ನನ್ನ ಗಂಡ ಒಂದು ಸುಳ್ಳು ದಾವೆಯನ್ನು ಹಾಕಿರುತ್ತಾರೆ, ಅದಕ್ಕೆ ಪೂರಕವಾಗಿ

ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಪಾಪದ ವ್ಯಕ್ತಿಯಾಗಿದ್ದು, ನನ್ನ ಗಂಡ ಬಹಳ ಜೋರಾಗಿದ್ದು, ಅವರಿಗೆ ಕಿರುಕುಳ ಕೊಡುವ ಉದ್ದೇಶದಿಂದ ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಲಯದಲ್ಲಿ ನುಡಿದ ಸಾಕ್ಷಿಯನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಇದೇ ವಿಚಾರವಾಗಿ ಸಲ್ಲಿಸಿರುತ್ತೇನೆ. ನಾನು ನ್ಯಾಯಲಯದಲ್ಲಿ ನುಡಿದ ಸಾಕ್ಷಿಯನ್ನು ಹೊರತುಪಡಿಸಿ ಬೇರೆ ವಿಚಾರವನ್ನು ನನ್ನ ವಕೀಲರಿಗೆ ಹೇಳಿರುವುದಿಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**